<u>ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾದಂ.ನ್ಯಾಯಾಲಯ, ಶೋರಾಪೂರ</u>

ಚಾಸಾ 06 ಪ್ರಾಸಾ 02

**<u>ಸಿ.ಸಿ. ನಂ.1531/2023</u>**

| | |
|---|---|
| ಹೆಸರು | ಃ ಡಾ.ಗಿರೀಶ್ ಕುಲಕರ್ಣಿ ತಂದೆ ಗುರುರಾಜ ಕುಲಕರ್ಣಿ |
| ಉದ್ಯೋಗ | ಃ ವೈದ್ಯರು, ಪ್ರಾಥಮಿಕ ಆರೋಗ್ಯ ಕೇಂದ್ರ ಕೆಂಭಾವಿ |
| ವಾಸ | ಃ ಕೆಂಭಾವಿ |

<u>ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು ದಿನಾಂಕಃ **09-03-2026**</u>

<u>ಮುಖ್ಯ ವಿಚಾರಣೆ ಃ ಸಹಾಯಕ ಸರಕಾರಿ ಅಭಿಯೋಜಕರವರಿಂದ ಃ</u>

ನಾನು ಜೂನ್ 2021 ರಿಂದ ಇಲ್ಲಿಯವರೆಗೂ ನಾನು ಕೆಂಭಾವಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕಾರ್ಯನಿರ್ವಹಿಸಿದ್ದೇನೆ.

2. ದಿಃ 20-06-2023 ರಂದು ನಾನು ಕರ್ತವ್ಯದ ಮೇಲೆ ಇದ್ದಾಗ ಚಾಸಾ-1 ಇವರು ಹಲ್ಲೆಯ ಹಿನ್ನೆಲೆಯಲ್ಲಿ ನಮ್ಮ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದರು. ಸದರಿ ಚಾಸಾ 1 ರವರನ್ನು ಪರಿಶೀಲಿಸಿದಾಗ ಈ ಕೆಳಕಂಡ ಗಾಯಗಳು ಕಂಡುಬಂದಿರುತ್ತವೆ.

1) ಬಲಗಡೆ ತಲೆಗೆ ಗಾಯವಾಗಿರುತ್ತದೆ.
2) ಎರಡಗಡೆ ಭುಜಕ್ಕೆ ಗಾಯವಾಗಿರುತ್ತದೆ.

3. ಈ ಮೇಲೆ ಹೇಳಿದ ಎಲ್ಲಾ ಗಾಯಗಳು ನನ್ನ ಅಭಿಪ್ರಾಯದಲ್ಲಿ ಸಾಮಾನ್ಯ ಸ್ವರೂಪಾದ ಗಾಯಗಳಾಗಿರುತ್ತವೆ. ಸದರಿ ಗಾಯಗಳು ನ್ಯಾಯಾಲಯದ ಮುಂದೆ ಇರುವ ಬಡಿಗೆಯಿಂದ ಹೊಡೆದರೆ ಆಗುವ ಸಾಧ್ಯತೆ ಇರುತ್ತದೆ. ಈ ಕುರಿತು ನಾನು ಗಾಯದ ಪ್ರಮಾಣ ಪತ್ರ

ಪೂರೆಸಿರುತ್ತೇನೆ. ನಾನು ಈಗ ನೋಡುತ್ತಿರುವ ಗಾಯದ ಪ್ರಮಾಣ ನನ್ನ ಸಹಿ ಇದ್ದು, ಸದರಿ ಪ್ರಮಾಣ ಪತ್ರವನ್ನು ಈಗಾಗಲೇ ನಿಪಿ-4 ಎಂದು ಗುರುತಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ಆರೋಪಿಯ ಪರ ಶ್ರೀ ಎಂ.ಎಂ.ಹೆಚ್ ವಕೀಲರಿಂದಃ</u>

ಚಾಸಾ-1 ರವರು ನಮ್ಮ ಆಸ್ಪತ್ರೆಗೆ ಬಂದಾಗ ನಾವು ಎಂ.ಎಲ್.ಸಿ ಮಾಡಿಸಿರುತ್ತೇವೆ. ಅದೇ ದಿನ ಪೋಲೀಸರು ಬಂದಿರುತ್ತಾರೆ. ಆ ದಿನ ಚಾಸಾ-1 ರವರು ನಮ್ಮ ಆಸ್ಪತ್ರೆಗೆ ಯಾವ ಸಮಯಕ್ಕೆ ಬಂದಿರುತ್ತಾರೆ ಎಂದು ನಾನು ನಿಪಿ-4 ರಲ್ಲಿ ನಮೂದಿರುವುದಿಲ್ಲ. ಆ ದಿನ ಎಷ್ಟು ಗಂಟೆಗೆ ಬಂದಿದ್ದರು ಅಂತ ನನಗೆ ಹೇಳಲು ಆಗುವುದಿಲ್ಲ. ಯಾವುದಾದರು ವ್ಯಕ್ತಿ ಮನೆಯ ಮುಂದೆ ಕಾಲು ಜಾರಿ ಬಿದ್ದಾಗ ನಿಪಿ-4 ರಲ್ಲಿ ನಮೂದಿಸಿದ ಗಾಯಗಳು ಆಗುವ ಸಾಧ್ಯತೆ ಇರುತ್ತದೆ ಎಂದರೆ ನಿಜ. ಚಾಸಾ-1 ಇವಳಿಗೆ ಸಹಾಯ ಮಾಡಲು ಸುಳ್ಳು ಗಾಯದ ಪ್ರಮಾಣಪತ್ರ ಪೂರೈಸಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲ.</u>

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪೂರ.

<u>ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾದಂ.ನ್ಯಾಯಾಲಯ,</u>

<u>ಶಹಾಪೂರ</u>

ಸಿ.ಡಬ್ಲ್ಯೂ 11 ಪಿ.ಡಬ್ಲ್ಯೂ4

<u>ಸಿ.ಸಿ. ನಂ. 953/2023</u>

| | | |
|---|---|---|
| ಹೆಸರು | ಃ | ದತ್ತಾತ್ರೆಯ |
| ತಂದೆ ಹೆಸರು | ಃ | ಬಸಣ್ಣ ದೇಗಿನಾಳ್ |
| ವಯಸ್ಸು | ಃ | 61 ವರ್ಷ |
| ಉದ್ಯೋಗ | ಃ | ನಿವೃತ್ತ ಪಿ.ಎಸ.ಐ ಬೀ.ಗುಡಿ. ಪೊಲೀಸ್ ಠಾಣೆ |
| ವಾಸ | ಃ | ಯಾದಗಿರಿ |

<u>ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು ದಿನಾಂಕಃ 06-07-2024</u>
<u>ಮುಖ್ಯ ವಿಚಾರಣೆ ಃ ಸಹಾಯಕ ಸರಕಾರಿ ಅಭಿಯೋಜಕರವರಿಂದ ಃ</u>

ನಾನು 06-12-2021 ರಿಂದ 31-12-2023 ರ ವರೆಗೆ ಭೀ-ಗುಡಿ ಠಾಣೆಯಲ್ಲಿ ಪಿಎಸಐ ಆಗಿ ಕಾರ್ಯನಿರ್ವಹಿಸಿರುತ್ತೇನೆ.

2. ದಿಃ 01-04-2023 ರಂದು ಚಾಸಾ10 ರವರಿಂದ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ವಹಿಸಿಕೊಂಡು ಅದೇ ದಿನ ಚಾಸಾ 4 ರಿಂದ 8 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ಅದೇ ದಿನ ಮಾನ್ಯ ನ್ಯಾಯಾಲಯಕ್ಕೆ PF ಸಲ್ಲಿಸಿರುತ್ತೇನೆ. ದಿಃ 02-04-2023 ರಂದು ಜಪ್ತಿಪಡಿಸಿಕೊಂಡು ಸ್ಯಾಂಪಲನ್ನು ನಮ್ಮ ಠಾಣಾ ಸಿಬ್ಬಂದಿ ಅನವೀರಪ್ಪ ಇವರ ಮೂಲಕ ಆರ್ ಎಫ್ ಎಸ್ ಎಲ್ ನಾಗನಹಳ್ಳಿಗೆ ಕಳುಹಿಸಿರುತ್ತೇನೆ. ದಿಃ 05-06-2023 ರಂದು FSL ವರದಿಯನ್ನು ಸ್ವೀಕರಿಸಿರುತ್ತೇನೆ. ದಿಃ19-07-2023 ರಂದು ಆರೋಪಿತನು ಮಾನ್ಯ ನ್ಯಾಯಾಲಯದಿಂದ ನೀರಿಕ್ಷಣಾ ಜಾಮೀನು ಪಡೆದುಕೊಂಡು ನನ್ನ ಮುಂದೆ ಹಾಜರಾಗಿರುತ್ತಾನೆ. ಅತನಿಗೆ ದಸ್ತಗಿರಿ ನಿಯಮ ಪಾಲಿಸಿ ಯೋಗ್ಯ ಜಾಮೀನಿನ ಮ್ೕಲೆ ಬಿಡುಗಡೆ ಮಾಡಿರುತ್ತೇನೆ. ದಿಃ 19-07-2023 ರಂದು ಮಾನ್ಯ ನ್ಯಾಯಾಲಯಕ್ಕೆ ದೋಷರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ. RFSL ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.3 ಎಂದು ಗುರುತಿಸಲಾಯಿತು. ಅದರ ಮೇಲಿರುವ ಸಾಕ್ಷಿ ಸಹಿ ನಿಪಿ.3(ಎ) ಎಂದು ಗುರುತಿಸಲಾಯಿತು. ಸದರಿ ಸ್ಯಾಂಪಲನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು

ಈಗಾಗಲೇ ಮು.ಮಾಲು 1 ಮತ್ತು 2 ಎಂದು ಗುರುತಿಸಲಾಗಿದೆ. ಆ ದಿನ ನನ್ನ ಮುಂದೆ ಹಾಜರಾದ ವ್ಯಕ್ತಿ ಇಂದು ಮಾನ್ಯ ನ್ಯಾಯಾಲಯದ ಮುಂದಿರುವ ಆರೋಪಿತನೆ ಆಗಿರುತಾನೆ.

ಪಾಟೀ ಸವಾಲು ಆರೋಪಿಯ ಪರ ವಕೀಲರಿಂದಃ

ಚಾಸಾ4 ರಿಂದ 8 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ಎಂದು ಹೇಳಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಎಫ್ ಎಸ್ ಎಲ್ ವರದಿಯನ್ನು ಸ್ವೀಕರಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಅರೋಪಿತನ ವಿರುದ್ದ ಅಪಾದನೆಗಳು ರುಜುವಾತು ಆಗದೆ ಇದ್ದರು ಸಹ ಆತನ ವಿರುದ್ದ ಸುಳ್ಳು ದೋಷರೋಪಣೆ ಪಟ್ಟಿಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಶಹಾಪೂರ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾದಂ.ನ್ಯಾಯಾಲಯ,
ಶಹಾಪೂರ

ಸಿ.ಡಬ್ಲ್ಯೂ4 ಪಿ.ಡಬ್ಲ್ಯೂ3

ಸಿ.ಸಿ. ನಂ. 953/2023

| | | |
|---|---|---|
| ಹೆಸರು | ಃ | ಮಾಯಪ್ಪ |
| ತಂದೆ ಹೆಸರು | ಃ | ಚಂದ್ರಾಮಪ್ಪ |
| ವಯಸ್ಸು | ಃ | 38 ವರ್ಷ |
| ಉದ್ಯೋಗ | ಃ | CPC 274 ಶಹಾಪೂರ ಪೋಲಿಸ್ ಠಾಣೆ |
| ವಾಸ | ಃ | ಶಹಾಪೂರ |

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು ದಿನಾಂಕಃ 03-07-2024
ಮುಖ್ಯ ವಿಚಾರಣೆ ಃ ಸಹಾಯಕ ಸರಕಾರಿ ಅಭಿಯೋಜಕರವರಿಂದ ಃ

ನಾನು 2017 ರಿಂದ 2022 ರವರೆಗೆ ನಾನುಭೀ ಗುಡಿ ಠಾಣೆಯಲ್ಲಿ ಪೊಲಿಸ್ ಪೇದೇ ಎಂದು ಕಾರ್ಯನಿರ್ವಹಿಸಿರುತ್ತೇನೆ.

ದಿಃ 31-03-2023 ರಂದು ಸಾಯಂಕಾಲ 8.15 ಗಂಟೆಗೆ ನಾನು ಠಾಣೆಯಲ್ಲಿದ್ದಾಗ ಚಾಸಾ1 ರವರು ನನಗೆ ಮತ್ತು ಚಾಸಾ5 ರಿಂದ 8 ರವರನ್ನು ಕರೆದು ಹೊತಪೆಟ ದಿಬ್ಬಿ ತಾಂಡಾದ ಸೇವಾಲಾಲ್ ಚೌಕ್ ಹತ್ತಿರ, ಜೈ ಭವಾನಿ ಹೋಟೆಲ್ ಎದುರುಗಡೆ ಯಾರೋ ಒಬ್ಬ ವ್ಯಕ್ತಿ ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡುತ್ತಿದ್ದಾನೆ ಎನ್ನುವ ಬಗ್ಗೆ ಖಚಿತ ಬಾತ್ಮಿ ಬಂದಿರುತ್ತದೆ. ಅದಕ್ಕಾಗಿ ದಾಳಿಗೆ ಮಾಡಲು ಹೋಗೆೀಕಾಗಿದೆ ಎಂದು ನಮಗೆ ತಿಳಿಸಿದರು. ನಂತರ ಚಾಸಾ1 ರವರು ಇತರ ಸಿಬ್ಬಂದಿಗಳ ಸಹಾಯದಿಂದ ಪಂಚರಾದ ಚಾಸಾ-2 ಮತ್ತು 3 ರವರನ್ನು ಠಾಣೆಗೆ ಕರೆಯಿಸಿ ಅವರಿಗೆ ದಾಳಿಯ ವಿಷಯವನ್ನು ತಿಳಿಸಿ ಪಂಚರಾಗಿ ಸಹಕರಿಸಲು ಕೋರಿಕೊಂಡ ಮೇರೆಗೆ ಅವರು ಒಪ್ಪಿಕೊಂಡಿರುತ್ತಾರೆ. ನಂತರ ನಾನು, ಚಾಸಾ1 ಪಂಚರಾದ ಚಾಸಾ-2 ಮತ್ತು 3, ಸಿಬ್ಬಂದಿಗಳಾದ ಚಾಸಾ-5 ರಿಂದ ಚಾಸಾ-8 ರವರು ನಮ್ಮ ಇಲಾಖಾ ಜೀಪನಲ್ಲಿ ಹೋಗಿ ರಾತ್ರಿ 8.40 ಕ್ಕೆ ಭೀಮರಾಯನಗುಡಿ ಪೊಲೀಸಠಾಣೆ ಬಿಟ್ಟು ಹೊತಪೇಟ ದಿಬ್ಬಿ ತಾಂಡಾ ಸೇವಾಲಾಲ್ ಚೌಕ್ ಹತ್ತಿರ ರಾತ್ರಿ8.45 ಗಂಟೆಗೆ ಹೋಗಿ ಸ್ವಲ್ಪ ದೂರದಲ್ಲಿ ಜೀಪನ್ನು ನಿಲ್ಲಿಸಿ ನಿಂತು ವಾಚ್ ಮಾಡಿದಾಗ ಒಂದು ಹೋಟೆಲ್ ಎದುರುಗಡೆ ಒಬ್ಬ ವ್ಯಕ್ತಿ ಮದ್ಯವನ್ನು ಮಾರಾಟ ಮಾಡುವದು ಕಂಡು ಬಂತು. ನಂತರ ನಾವು ಆತನ ಮೇಲೆ ದಾಳಿ ಮಾಡಿದಾಗ ಆರೋಪಿಯು ನಮ್ಮನು ನುೆಾಡಿ ಓಡಿ ಹೋದನು, ನಂತರ ಅವನ ಹೆಸರನ್ನು ಅಲ್ಲಿ ಸ್ಥಳಿಯವಾಗಿ ವಿಚಾರಿಸಿದಾಗ ಆತನ ಹೆಸರನ್ನು ಬಸವರಾಜ ತಂದೆ ಚತ್ರು ನಾಯ್ಕ್ಕರಾಠೊಡ ಸಾಃ

ಹೊತಪೇಟ ದಿಬ್ಬಿ ತಾಂಡಾ (ನಡುವಿನ ತಾಂಡಾ) ಎಂದು ತಿಳಿಸಿದರು.

3. ನಂತರ ಸ್ಥಳದಲ್ಲಿ ಪರಿಶೀಲಿಸಿದಾಗ 650 ಎಂ.ಎಲ್ ಅಳತೆಯ 30 king fisher ಬೀಯರ್ ಬಾಟಲಿಗಳು ಇದ್ದವು. 180 ಎಂ.ಎಲ್. ಅಳತೆಯ ಮದ್ಯ ತುಂಬಿದ 12 ಬ್ಲಾಕ್ ವಿಸ್ಕಿಯ ಬಾಟಲಿಗಳು ಇದ್ದವು. ಸದರಿ ರಾಸಾಯನಿಕ ಪರೀಕ್ಷೆಗಾಗಿ ತಲಾ 1 ಬಾಟಲಗಳನ್ನು ಮಾದರಿಗಾಗಿ ಪ್ರತ್ಯೇಕವಾಗಿ ತೆಗೆದು ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಸೀಲ್ ಮಾಡಿ, ಪಂಚರು ಸಹಿ ಮಾಡಿರುವ ಚೀಟಿಯನ್ನು ಅಂಟಿಸಿರುತ್ತೇವೆ. ಈ ಬಗ್ಗೆ ಸ್ಥಳದಲ್ಲಿ ಪಂಚನಾಮೆ ರಾತ್ರಿ 8.45 ರಿಂದ 9.00 ಗಂಟೆಯ ವರೆಗೆ ಜೀಪಿನ ಬೆಳಕಿನಲ್ಲಿ ಮಾಡಿ ಮೇಲೆ ಹೇಳಿದ ಎಲ್ಲಾ ವಸ್ತುಗಳನ್ನು ಜಪ್ತಿಪಡಿಸಿಕೊಂಡಿರುತ್ತೇವೆ. ನಂತರ ಮುದ್ದೆ ಮಾಲುಗಳೊಂದಿಗೆ ಠಾಣೆಗೆ ಬಂದಿರುತೇವೆ. ಘಟನೆಯ ಬಗ್ಗೆ ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿರುತ್ತೇನೆ.

4. ಮೇಲೆ ಹೇಳಿದ ಮುದ್ದೆ ಮಾಲುಗಳನ್ನು ಹಾಗೂ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ ಒಂದು ಬಾಟಲ್‌ಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮು.ಮಾ.1 ಮತ್ತು 2 ಎಂದು ಗುರುತಿಸಲಾಯಿತು. ಆ ದಿನ ಸ್ತಳದಿಂದ ಓಡಿಹೋದ ಆರೋಪಿ ಇಂದು ಮಾನ್ಯ ನ್ಯಾಂನೂಲಯದ ಮುಂದಿರುವ ಆರೋಪಿತನೇ ಆಗಿರುತ್ತಾನೆ.

<u>ಪಾಟೀ ಸವಾಲು ಆರೋಪಿಯ ಪರ ವಕೀಲರಿಂದ .</u>

5. ಘಟನೆಯ ದಿನ ನಾನು ಮ.2.00 ಗಂಟೆಗೆ ಕರ್ತವ್ಯಕ್ಕೆ ಹಾಜರುಗಿರುತ್ತೇನೆ. ಚಾಸಾ1 ರವರು ನನಗೆ ಕರೆದಾಗ ನಾನು ಭೀ ಗುಡಿಯ ಸರ್ಕಲನಲ್ಲಿ ಇದ್ದಿದ್ದೆ. ಚಾಸಾ1 ರವರು ನನಗೆ ಠಾಣೆಗೆ ಕರೆದಿದ್ದರು. ಪಂಚರಾದ ಚಾಸಾ2 ಮತ್ತು 3 ರವರು ಆ ಕಾಲಕ್ಕೆ ಎಲ್ಲಿದ್ದರು ಎಂದು ನನಗ ಗೊತ್ತಿಲ್ಲ, ಚಾಸಾ2 ಮತ್ತು 3 ರವನ್ನು ಯಾರು ಕರೆದುಕೊಂಡು ಬಂದಿದ್ದರು ಎಂದು ನನಗೆ ಗೊತ್ತಿಲ್ಲ. ಗುನ್ನಾಸ್ಥಳವು ನಮ್ಮ ಠಾಣೆಯಿಂದ ½ ಕಿ.ಮಿ ದೂರದಲ್ಲಿ ರುತ್ತದೆ. ಸಾಮಾನ್ಯವಾಗಿ ½ ಕಿ.ಮಿ. ರಸ್ತೆ 5 ನಿಮೀಷದಲ್ಲಿ ಹೊೀಗಬಹುದು. ಆ ದಿನ ನಾವು ಠಾಣೆಯಿಂದ 8.40 ಗಂಟೆಗೆ ಬಿಟ್ಟೇವು ಘಟನಾ ಸ್ತಳಕ್ಕೆ 5 ನಿಮೀಷದಲ್ಲಿ ತಲುಪಿರುತ್ತೇವೆ. ಆ ದಿನ ನಾವು 10 0 ಮೀಟರ ದೂರದಿಂದ ವಾಚ್ ಮಾಡುತ್ತಿದ್ದೇವು. ಆ ದಿನ ಕತ್ತಲಾಗಿತ್ತು ಎಂದರ ಸಾಕ್ಷಿಯು ಲೈಟಿನ ಬೆಳಕು ಇದ್ದಿತ್ತು ಎಂದು ಹೇಳುತ್ತಾರೆ. ಸಾಮಾನ್ಯವಾಗಿ ಕತ್ತಲಾಗಿದ್ದರಿಂದ 100 ಮೀ ದೂರದಿಂದ ಒಬ್ಬ ವ್ಯಕ್ತಿಯನ್ನು ಗುರುತಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ. ಸದರಿ ಗುನ್ನಾ ಸ್ತಳವು ಹೆ.ರಾ. ಹೊಂದಿಕೊಂಡಂತೆ ಇರುತ್ತದೆ ಎಂದರೆ ಸಾಕ್ಷಿಯು 100 ಮೀಟರ ದೂರಲ್ಲಿರುತ್ತದೆ ಎಂದು ಹೇಳುತ್ತಾರೆ. ಪತ್ರಾಶೆಡ್ಡಿನ ಮರೆಯಲ್ಲಿ

ನಿಂತು ವಾಚ್ ಮಾಡಿದೇವು. ನಾವು ವಾಚ್ ಮಾಡುತ್ತಿದ್ದಾಗ ಜನರು ಅಲ್ಲಿ ಸಾರಾಯಿ ಖರೀದಿ ಮಾಡುವುದು ಕಂಡು ಬಂದಿತ್ತು. ಅಲ್ಲಿ ಸರಾಯಿ ಖರೀದಿಸಲು ಬಂದಿದ್ದ ವ್ಯಕ್ತಿಯನ್ನು ನಾವು ಆರೋಪಿತ ಬಗ್ಗೆ ವಿಚಾರಿಸಿದೇವು. ಆ ದಿನ ನಾವು ಆರೋಪಿತನನ್ನು ಹಿಡಿಯಲು ಪ್ರಯತ್ನಿಸಿರುತ್ತೇವೆ ಆದರೆ ಅವನು ಸಿಕ್ಕಿರುವುದಿಲ್ಲ. ಸದರಿ ಆರೋಪಿತನನ್ನು ಹಿಡಿಯಲು ಚಾಸಾ 5 ಮತ್ತು 6 ರವರು ಹಿಡಿಯಲು ಪ್ರಯತ್ನಿಸಿರುತ್ತಾರೆ. ಆತನು ಯಾವ ದಿಕ್ಕಿನ ಕಡೆಗೆ ಓಡಿ ಹೋದ ಎಂದು ನನಗೆ ಗೊತ್ತಿಲ್ಲ. ನಾನು ಹೇಳುವಂತೆ ಆರೂಪಿತ ಯಾವುದೇ ಅಪರಾಧ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಅಂಕೆ ಸಂಖೆಗಳಿಗೊಸ್ಕರ ಆರೋಪಿತನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಚಾಸಾ2 ಮತ್ತು 3 ರವರು ನಮ್ಮ ಠಾಣೆಯ ಖಾಯಂ ಪಂಚರಾಗಿದ್ದು ಅವರನ್ನು ಈ ಪ್ರಕರಣದಲ್ಲಿ ಸಾಕ್ಷಿದಾರರನ್ನಾಗಿ ಸೇರಿಸಿ ಆರೋಪಿತನ ವಿರುದ್ದ ಸುಳ್ಳು ಪ್ರಕರಣ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ-ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಶಹಾಪೂರ.

<u>ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾದಂ.ನ್ಯಾಯಾಲಯ,</u>

<u>ಶಹಾಪೂರ</u>

ಸಿ.ಡಬ್ಲ್ಯೂ2 ಪಿ.ಡಬ್ಲ್ಯೂ2

<u>ಸಿ.ಸಿ. ನಂ. 953/2023</u>

| | |
|---|---|
| ಹೆಸರು | ಃ ಸಂಜೀವ |
| ತಂದೆ ಹೆಸರು | ಃ ಬಾಲಪ್ಪ |
| ವಯಸ್ಸು | ಃ 32 ವರ್ಷ |
| ಉದ್ಯೋಗ | ಃ ಚಹಾ ವ್ಯಾಪಾರ |
| ವಾಸ | ಃ ಶಕಾಪೂರ |

<u>ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು ದಿನಾಂಕಃ 03-07-2024</u>
<u>ಮುಖ್ಯ ವಿಚಾರಣೆ ಃ ಸಹಾಯಕ ಸರಕಾರಿ ಅಭಿಯೋಜಕರವರಿಂದ ಃ</u>

ಚಾಸಾ-3 ರವರು ನನಗೆ ಗೊತ್ತಿಲ್ಲ. ಈ ಕೇಸಿನ ಆರೋಪಿಯನ್ನು ನಾನು ನೋಡಿಲ್ಲ. ಈ ಹಂತದಲ್ಲಿ ಸಾಕ್ಷಿಗೆ ನಿಪಿ.2 ಜಪ್ತಿ ಪಂಚನಾಮೆ ತೋರಿಸಲಾಗಿ ಅದಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಅದನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು 1 ವರ್ಷದಿ ಹಿಂದೆ ಭೀ-ಗುಡಿ ಠಾಣೆಯಲ್ಲಿ ಪೊಲೀಸರು ಹೇಳಿದ ಮೇರೆಗೆ ಮಾಡಿರುತ್ತೇನೆ. ನಿ.ಪಿ.2 ರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ಪಂಚನಾಮೆಯನ್ನು ಮಾಡಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಜಪ್ತಿಪಡಿಸಿಕೊಂಡಿಲ್ಲ. ಈ ಕೇಸಿನಲ್ಲಿ ಜಪ್ತಿಪಡಿಸಿಕೊಂಡಿರುವ ಮುದ್ದೆ ಮಾಲುಗಳನ್ನು ನಾನು ನೋಡಿಲ್ಲ.

(ಈ ಹಂತದಲ್ಲಿ ಸ.ಸ.ಅ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದರು. ಅನುಮತಿ ಕೊಟ್ಟಿದೆ)

<u>ಪಾಟೀ ಸವಾಲುಃ ಸ.ಸ.ಅ. ರವರಿಂದಃ</u>

ದಿಃ 31-03-2023 ರಂದು ಸಾಯಂಕಾಲ 8.30 ಗಂಟೆಗೆ ಚಾಸಾ1 ರವರು ನನಗೆ ಮತ್ತು ಚಾಸಾ3 ರವರನ್ನು ಕರೆದು ತಮಗೆ ಬಂದ ಬಾತ್ಮಿ ನಮಗೆ ತಿಳಿಸಿ ದಾಳಿಗೆ ಹೊಗಲು ತಿಳಿಸಿ ಪಂಚರಾಗಿ ಸಹಕರಿಸಲು ಕೋರಿದರು ಎಂದರೆ ಸರಿಯಲ್ಲ. ನಾವು ಅವರ ಕೋರಿಕೆಗೆ

ಒಪ್ಪಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಂತರ ನಾನು ಚಾಸಾ-1, 3 ರಿಂದ 8 ರವರು ಇಲಾಖಾ ಜೀಪನಲ್ಲಿ ಮೇಲೆ ಹೇಳಿದ ಹೊತಪೇಟ ದಿಬ್ಬಿ ತಾಂಡಾಕ್ಕೆ ಹೋಗಿರುತ್ತೇವೆ ಎಂದರೆ ಸರಿಯಲ್ಲ, ಅಲ್ಲಿ ಜೈ ಭವಾನಿ ಹೊಟೇಲ ಹತ್ತೀರ ಸ್ವಲ್ಪ ದೂರದಲ್ಲಿ ಜೀಪನ್ನು ನಿಲ್ಲಿಸಿ ಸದರಿ ಗೋಡೆಗೆ ಮರೆಯಾಗಿ ನಿಂತು ನೋಡಲಾಗಿ ಮೇಲೆ ಹೇಳಿದ ಸ್ಥಳದಲ್ಲಿ ಆರೋಪಿತನ್ನು ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದ ಎಂದರೆ ಸರಿಯಲ್ಲ.

3. ಅಲ್ಲಿ ನಮ್ಮ ಸಮಕ್ಷಮದಲ್ಲಿ ಪೊಲೀಸರು ದಾಳಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅಲ್ಲಿ ಆರೋಪಿ ಪೊಲಿಸರನ್ನು ನೋಡಿ ಅಲ್ಲಿಂದ ಓಡಿ ಹೋದ ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ತಲಾ 650 ಎಂ.ಎಲ್ ಸಾಮಾರ್ಥ್ಯದ 30 King Fisher bear ಬಾಟಲಿಗಳು, 180 ML ನ 12 Black Deluxe ವಿಸ್ಕಿಗಳು ಇದ್ದವು ಎಂದರೆ ಸರಿಯಲ್ಲ. ಅವುಗಳನ್ನು ನಮ್ಮ ಸಮಕ್ಷಮದಲ್ಲಿ ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಷದ್ರಿ ಪಂಚನಾಮೆಗೆ ನಾನು ಮತ್ತು ಚಾಸಾ3 ರವರು ಸ್ತಳದಲ್ಲಿಯೇ ಸಹಿ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆ ನಮಗೆ ಓದಿ ಹೇಳಿದ ಮೇಲಿ ಸಹಿ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಆರೊಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೊಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿಗಳ ಪರವಾಗಿಃ-

-ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಶಹಾಪೂರ.

## ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾದಂ.ನ್ಯಾಯಾಲಯ, ಶಹಾಪೂರ

ಸಿ.ಡಬ್ಲ್ಯೂ 1 ಪಿ.ಡಬ್ಲ್ಯೂ1

ಸಿ.ಸಿ. ನಂ. 953/2023

| | |
|---|---|
| ಹೆಸರು | ಃ ಗಜಾನನ |
| ತಂದೆ ಹೆಸರು | ಃ ಮದಗೊಂಡ |
| ವಯಸ್ಸು | ಃ 31 ವರ್ಷ |
| ಉದ್ಯೋಗ | ಃ ಪಿ.ಎಸ್. ಐ. ಬಿ- ಗುಡಿ ಠಾಣೆ |
| ವಾಸ | ಃ ಬಿ.ಗುಡಿ |

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು ದಿನಾಂಕಃ 10-01-2024
ಮುಖ್ಯ ವಿಚಾರಣೆ ಃ ಸಹಾಯಕ ಸರಕಾರಿ ಅಭಿಯೋಜಕರವರಿಂದ ಃ

ನಾನು ದಿಃ 07-11-2022 ರಿಂದ ಇಲ್ಲಿವರೆಗೆ ಭೀಮರಾಯನಗುಡಿ ಆರಕ್ಷಕ ಠಾಣೆಯಲ್ಲಿ ಪಿಎಸಐ ಆಗಿ ಕಾರ್ಯನಿರ್ವಹಿಸುತ್ತಿದ್ದೇನೆ.

2. ದಿಃ 31-03-2023 ರಂದು ಸಾಯಂಕಾಲ 8.15 ಗಂಟೆಗೆ ನಾನು ಠಾಣೆಯಲ್ಲಿದ್ದಾಗ ಹೊತಪೆಟ ದಿಬ್ಬಿ ತಾಂಡಾದ ಸೇವಾಲಾಲ್ ಚೌಕ್ ಹತ್ತಿರ, ಜೈ ಭವಾನಿ ಹೋಟಿಲ್ ಎದುರುಗಡೆ ಯಾರೋ ಒಬ್ಬ ವ್ಯಕ್ತಿ ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡುತ್ತಿದ್ದಾನೆ ಎನ್ನುವ ಬಗ್ಗೆ ಖಚಿತ ಬಾತ್ಮಿ ಬಂದ ಮೇರೆಗೆ ನಾನು ಚಾಸಾ-4 ರಿಂದ 8 ರವರನ್ನು ಕರೆದು ಅವರಿಗೆ ವಿಷಯ ತಿಳಿಸಿ ನಾವು ಅಲ್ಲಿಗೆ ಹೋಗಿ ದಾಳಿ ಮಾಡಬೇಕಾಗಿದೆ ಎಂದು ಹೇಳಿರುತ್ತೇನೆ. ನಂತರ ಸಿಬ್ಬಂದಿಗಳ ಸಹಾಯದಿಂದ ನಾನು ಇಬ್ಬರು ಪಂಚರಾದ ಚಾಸಾ-2 ಮತ್ತು 3 ರವರನ್ನು ಠಾಣೆಗೆ ಕರೆಯಿಸಿ ಅವರಿಗೆ ದಾಳಿಯ ವಿಷಯವನ್ನು ತಿಳಿಸಿ ಪಂಚರಾಗಿ ಸಹಕರಿಸಲು ಕೋರಿಕೊಂಡ ಮೇರೆಗೆ ಅವರು ಒಪ್ಪಿಕೊಂಡಿರುತ್ತಾರೆ. ನಂತರ ನಾನು, ಪಂಚರಾದ ಚಾಸಾ-2 ಮತ್ತು 3, ಸಿಬ್ಬಂದಿಗಳಾದ ಚಾಸಾ-4 ರಿಂದ ಚಾಸಾ-8 ರವರು ನಮ್ಮ ಇಲಾಖಾ ಜೀಪನಲ್ಲಿ ಹೋಗಿ ರಾತ್ರಿ 8.45 ಕ್ಕೆ ಭೀಮರಾಯನಗುಡಿ ಪೊಲೀಸಠಾಣೆ ಬಿಟ್ಟು ಹೊತಪೇಟ ದಿಬ್ಬಿ ತಾಂಡಾ ಸೇವಾಲಾಲ್ ಚೌಕ್ ಹತ್ತಿರ ರಾತ್ರಿ9.00 ಗಂಟೆಗೆ ಹೋಗಿ ಸ್ವಲ್ಪ ದೂರದಲ್ಲಿ ಜೀಪನ್ನು ನಿಲ್ಲಿಸಿ ನಿಂತು ವಾಚ್ ಮಾಡಿದಾಗ ಒಂದು ಹೋಟಿಲ್ ಎದುರುಗಡೆ ಒಬ್ಬ ವ್ಯಕ್ತಿ ಮದ್ಯವನ್ನು ಮಾರಾಟ ಮಾಡುವದು ಕಂಡು ಬಂತು. ನಂತರ ನಾವು ಆತನ ಮೇಲೆ

ದಾಳಿ ಮಾಡಿದಾಗ ಆರೋಪಿಯುನ ನಮ್ಮನು ನು್ೂಡಿ ಓಡಿ ಹೋದನು, ನಂತರ ಅವನ ಹೆಸರನ್ನು ಅಲ್ಲಿ ಸ್ಥಳಿಚಿಯವಾಗಿ ವಿಚಾರಿಸಿದಾಗ ಆತನ ಹೆಸರನ್ನು ಬಸವರಾಜ ತಂದೆ ಚತ್ರುನಾಯ್ಕ ರಾಠೊಡ ಸಾಃ ಹೊತಪೇಟ ದಿಬ್ಬಿ ತಾಂಡಾ ಎಂದು ತಿಳಿಸಿದರು.

3. ನಂತರ ಸ್ಥಳದಲ್ಲಿ ಪರಿಶೀಲಿಪಿಸಿದಾಗ 650 ಎಂ.ಎಲ್ ಅಳತೆಯ 30 king fisher ಬೀಯರ್ ಬಾಟಲಗಳು ಇದ್ದವು. 180 ಎಂ.ಎಲ್. ಅಳತೆಯ ಮದ್ಯ ತುಂಬಿದ 12 ಬ್ಲಾಕ್ ವಿಸ್ಕಿಯ ಬಾಟಲಗಳು ಇದ್ದವು. ಸದರಿ ಸ್ಥಳದಲ್ಲಿ ನಾನು ಪಂಚರ ಸಮಕ್ಷಮ ರಾಸಾಯನಿಕ ಪರೀಕ್ಷೆಗಾಗಿ ತಲಾ 1 ಬಾಟಲಗಳನ್ನು ಮಾದರಿಗಾಗಿ ಪ್ರತ್ಯೇಕವಾಗಿ ತೆಗೆದು ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಸೀಲ್ ಮಾಡಿ, ಪಂಚರು ಸಹಿ ಮಾಡಿರುವ ಚೀಟಿಯನ್ನು ಅಂಟಿಸಿರುತ್ತೇವೆ. ಈ ಬಗ್ಗೆ ಸ್ಥಳದಲ್ಲಿ ಪಂಚನಾಮೆ ರಾತ್ರಿ 9.15 ರಿಂದ 10.15 ರವರೆಗೆ ಜೀಪಿನ ಬೆಳಕಿನಲ್ಲಿ ಮಾಡಿ ಮೇಲೆ ಹೇಳಿದ ಎಲ್ಲಾ ವಸ್ತುಗಳನ್ನು ಜಪ್ತಿಪಡಿಸಿಕೊಂಡಿರುತ್ತೇನೆ. ನಂತರ ಮುದ್ದೆ ಮಾಲುಗಳೊಂದಿಗೆ ಠಾಣೆಗೆ ಬಂದು ನನ್ನ ವರದಿಯೊಂದಿಗೆ ಚಾಸಾ11 ಮುಂದೆ ಹಾಜರುಪಡಿಸಿರುತ್ತೇನೆ.

4. ಸಾಕ್ಷಿಯು ತನ್ನ ಸದರಿ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ಮೇಲೆ ಹೇಳಿದ ಜಪ್ತಿ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.2 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ಮೇಲೆ ಹೇಳಿದ ಮುದ್ದೆ ಮಾಲುಗಳನ್ನು ಹಾಗೂ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ ಒಂದು ಬಾಟಲ್‌ಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಮು.ಮಾ.1 ಮತ್ತು 2 ಎಂದು ಗುರುತಿಸಲಾಯಿತು. ಆ ದಿನ ಸ್ತಳದಿಂದ ಓಡಿಹೋದ ಆರೂಪಿ ಇಂದು ಮಾನ್ಯ ನ್ಯಾಂನೂಲಯದ ಮುಂದಿರುವ ಆರೋಪಿತನೇ ಆಗಿರುತ್ತಾನೆ.

<u>ಪಾಟೀ ಸವಾಲು ಆರೋಪಿಯ ಪರವಾಗಿ ಶ್ರೀ. ಎಂ.ಎನ್.ಪಿ. ವಕೀಲರಿಂದ .</u>

ಪಂಚರನ್ನು ಕರೆಯಿಸಲು ನಮ್ಮ ಠಾಣಾ ಸಿಬ್ಬಂದಿಗೆ ಹೇಳಿದಾಗ ರಾತ್ರಿ ಸಮಯ 8.15 ಗಂಟೆ ಆಗಿತ್ತು. ಆ ದಿನ ಪಂಚರನ್ನು ನಮ್ಮ ಠಾಣೆಯ ಯಾವ ಸಿಬ್ಬಂದಿ ಕರೆದುಕೊಂಡು ಬಂದರು ಎಂದು ನನಗೆ ನೆನಪಿಲ್ಲ. ಸದ್ರಿ ಪಂಚರು ಬಿ-ಗುಡಿಯಲ್ಲಿ ವಾಸವಾಗಿರುತ್ತಾರೆ. ಚಾಸಾ

2 ಪಂಚರು ರವರು ನಮ್ಮ ಠಾಣೆಯಲ್ಲಿ ತಾತ್ಕಾಲಿಕವಾಗಿ ಕೆಲಸ ಮಾಡುತ್ತಾರೆ ಎಂದರೆ ಸರಿಯಲ್ಲ. ಸದ್ರಿ ಚಾಸಾ2 ಮತ್ತು 3 ರವರು ನಮ್ಮ ಠಾಣೆಯ 10-15 ಪ್ರಕರಣಗಳಲ್ಲಿ ಸಾಕ್ಷಿ ನುಡಿದಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ2 ಮತ್ತು 3 ರವರು ನಮ್ಮ ಠಾಣೆಯ ಖಾಯಂ ಪಂಚರಾಗಿದ್ದರೂ ಸಹ ಅವರುಗಳು ನಮ್ಮ ಠಾಣೆಗೆ ಸಂಬಂದಿಸಿದ ಪ್ರಕಗಳಲ್ಲಿ ಸಾಕ್ಷಿನುಡಿದಿರುವುದಿಲ್ಲ ಎಂದು ಹೇಳಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ಪೊಲಿಸ್ ಠಾಣೆಯಿಂದ ಗುನ್ಹಾ ಸ್ತಳ ½ ಕಿ.ಮಿ. ದೂರಲ್ಲಿರುತ್ತದೆ. ನಾನು ಹೇಳುವ ಗುನ್ಹಾ ಸ್ತಳ ಶಹಾಪೂರ-ಕಲಬುರ್ಗಿ ರಸ್ತೆಗೆ ಸಮೀಪದಲ್ಲಿರುತ್ತದೆ ಎಂದರೆ ಸರಿ. ಗುನ್ಹಾ ಸ್ಥಳದ ಹತ್ತಿರದಲ್ಲಿ ಬಹಳಷ್ಟು ಹೊಟೇಲಗಳು ಇರುತ್ತವೆ ಎಂದರೆ ಸರಿ. ಅಲ್ಲಿ ಯಾವಾಗಲೂ ಜನರು ಇರುತ್ತಾರೆ ಎಂದರೆ ಸರಿ. ಗುನ್ಹಾ ಸ್ಥಳದಲ್ಲಿ ಇದ್ದಂತಹ ಜನರನ್ನು ಪಂಚರಾಗುವಂತೆ ನಾನು ಕೇಳಿರುವುದಿಲ್ಲ.

ನಾವು 50 ಮಿ. ದೂದಲ್ಲಿದ್ದಾಗ ಆರೋಪಿ ನಮ್ಮನ್ನು ನೋಡಿ ಓಡಿ ಹೋದನು. ಆರೋಪಿತನನ್ನು ನಮ್ಮ ಎಲ್ಲಾ ಸಿಬ್ಬಂದಿಯವರು ಹಿಡಿಯಲು ಪ್ರಯತ್ನ ಪಟ್ಟಿದ್ದರು. ಸದರಿ ಆರೋಪಿ ಗುನ್ಹಾ ಸ್ಥಳದಿಂದ ಯಾವ ದಿಕ್ಕಿನ ಕಡೆಗೆ ಓಡಿ ಹೋದ ಎಂದು ನನಗೆ ಹೇಳಲು ಆಗುವುದಿಲ್ಲ. ಅಲ್ಲಿ ಆರೋತನಿಂದ ಸಾರಾಯಿ ಖರೀದಿ ಮಾಡುವ ವ್ಯಕ್ತಿಗಳು ಇದಿದ್ದರು. ಜೈ ಭವಾನಿ ಹೊಟೇಲ್ ನ ಮುಖ್ಯ ಬಾಗಿಲು ಪೂರ್ವ ದಿಕ್ಕಿಗೆ ಮುಖ ಮಾಡಿ ಇರುತ್ತದೆ. ಸದ್ರಿ ಹೊಟೇಲ್ ನ ಪೊಟೊ ತೆಗೆದಿರುವುದಿಲ್ಲ. ನಾವು ಜಪ್ತಿಪಡಿಸಿಕೊಂಡಿದ್ದೇವು ಎಂದು ಹೇಳುವ ಮುದ್ದೆ ಮಾಲುಗಳ ಬ್ಯಾಚ್ ನಂಬ್ರ ನನಗೆ ಹೇಳಲು ಆಗುವುದಿಲ್ಲ. ನಾನು ನನ ಮುಖ್ಯ ವಿಚಾರಣೆಯಲ್ಲಿ ಹೇಳಿಳಿರುವಂತೆ ಗುನ್ಹಾೃ ಸ್ಥಳಕ್ಕೆ ಬೇಟಿ ನೀಡಿರುವುದ್ಲಿ ಎಂದರೆ ಸರಿಯಲ್ಲ, ನಾನು ಹೇಳುವಂತೆ ಆರೂಪಿತ ಯಾವುದೇ ಅಪರಾಧ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಅಂಕೆ ಸಂಖೆಗಳಿಗೊಸ್ಕರ ಆರೋಪಿತನ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಚಾಸಾ2 ಮತ್ತು 3 ರವರು ನಮ್ಮ ಠಾಣೆಯ ಖಾಯಂ ಪಂಚರಾಗಿದ್ದು ಅವರನ್ನು ಈ ಪ್ರಕರಣದಲ್ಲಿ ಸಾಕ್ಷಿದಾರರನ್ನಾಗಿ ಸೇರಿಸಿ ಆರೋಪಿತನ ವಿರುದ್ದ ಸುಳ್ಳು ವರದಿ ಸಲ್ಲಿಸಿ ಸುಳ್ಳು ಪ್ರಕರಣ ದಾಖಲಿಸಿರುತ್ತೆವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ-ಇಲ್ಲ**.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಶಹಾಪೂರ.